# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1497 (1727)** |
| ಸದಸ್ಯರ ಹೆಸರು | : | ಶ್ರೀ. ಎನ್ ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23.03.2020 |
| ಉತ್ತರಿಸುವ ಸಚಿವರು | : | ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಭಾಷಾ ಅಲ್ಪಸಂಖ್ಯಾಂತರ ಶಿಕ್ಷಣ ಸಂಸ್ಥೆಗಳ ವ್ಯಾಖ್ಯಾನವೇನು; ಭಾಷಾ ಅಲ್ಪಸಂಖ್ಯಾಂತರ ಶಾಲೆಗಳಿಗೆ ಸರ್ಕಾರ ನೀಡುತ್ತಿರುವ ರಿಯಾಯಿತಿಗಳೇನು; ಈ ಶಿಕ್ಷಣ ಸಂಸ್ಥೆಗಳು ಶಿಕ್ಷಣವನ್ನು ವ್ಯಾಪಾರದ ರೀತಿಯಲ್ಲಿ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಅಂತಹ ಶಿಕ್ಷಣ ಸಂಸ್ಥೆಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; | 1. ಜಸ್ಟೀಸ್ ರಂಗನಾಥ ಮಿಶ್ರ, ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಅಧ್ಯಕ್ಷರು, ಮತೀಯ ಮತ್ತು ಭಾಷಾ ಅಲ್ಪಸಂಖ್ಯಾತರ ಆಯೋಗ, ಭಾರತ ಸರ್ಕಾರ, ಇವರು ದಿನಾಂಕ:10/05/2007ರಲ್ಲಿ ನೀಡಿರುವ ವರದಿಯನ್ವಯ ಭಾಷಾ ಅಲ್ಪಸಂಖ್ಯಾತರ ಸಮುದಾಯ ಒಂದು ರಾಜ್ಯದಲ್ಲಿ ಭಾಷಾ ಅಲ್ಪಸಂಖ್ಯಾತರಾಗಿದ್ದು, ಆ ಸಮುದಾಯವು ಒಂದು ಅಥವಾ ಹೆಚ್ಚು ಭಾಷೆಗಳನ್ನು ಮಾತನಾಡುವ ಸಮುದಾಯವು ಆಗಿದ್ದು, ಆ ರಾಜ್ಯದ ಬಹು ಸಂಖ್ಯಾತ ಭಾಷೆ ಮಾತನಾಡದೇ ಇರುವ ಭಾಷೆಯನ್ನು ಅಲ್ಪ ಸಂಖ್ಯಾತರ ಭಾಷೆಯೆಂದು ಪರಿಗಣಿಸಿ ಹಾಗೂ ಅಂತಹ ಸಮುದಾಯಗಳು ನಡೆಸುವ ಶಿಕ್ಷಣ ಸಂಸ್ಥೆಗಳನ್ನು ಭಾಷಾ ಅಲ್ಪಸಂಖ್ಯಾಂತರ ಶಿಕ್ಷಣ ಸಂಸ್ಥೆಯೆಂದು ವ್ಯಾಖ್ಯಾನಿಸಲಾಗಿದೆ. ಅದರಂತೆ, ಸರ್ಕಾರದ ಆದೇಶ ಸಂಖ್ಯೆ: ಇಡಿ 226 ಮಾಹಿತಿ 2018 ದಿನಾಂಕ:05/11/2018ರ ಆದೇಶದಲ್ಲಿ **"ಉರ್ದು, ತೆಲುಗು, ತಮಿಳು, ಮಲಯಾಳಂ, ಮರಾಠಿ, ತುಳು, ಲಮಾಣಿ, ಹಿಂದಿ, ಕೊಂಕಣಿ ಮತ್ತು ಗುಜರಾತಿ"** ಬಾಷೆಗಳನ್ನು ಅಲ್ಪಸಂಖ್ಯಾತ ಭಾಷೆಗಳೆಂದು ಅಧಿಸೂಚಿಸಿ ಆದೇಶಿಸಿದೆ.<br><br>2. ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 27 ಮಾಹಿತಿ 2012, ದಿನಾಂಕ:08/05/2012ರ ಪ್ರಕಾರ ಶಿಕ್ಷಣ ಹಕ್ಕು ಕಾಯ್ದೆ 2009ರ ಸೆಕ್ಷನ್ 12 (1)ರ ಅಡಿ ಅನಾನುಕೂಲ ಪರಿಸ್ಥಿತಿಯಲ್ಲಿರುವ ಮತ್ತು ದುರ್ಬಲ ವರ್ಗದ ಮಕ್ಕಳಿಗೆ ಪ್ರವೇಶ ನೀಡುವ ಪ್ರಕ್ರಿಯೆಯಿಂದ ವಿನಾಯಿತಿ ನೀಡಲಾಗಿದೆ. (ಆರ್.ಟಿ.ಇ. ವಿನಾಯಿತಿ)<br><br>ಶುಲ್ಕ ಮತ್ತು ಡೊನೇಷನ್‌ಗಳನ್ನು ನಿಯಂತ್ರಿಸಲು ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗಿದೆ.<br><br>The Karnataka Educational Institutions (Classification, Regulation and Prescription of curricula etc.) Rules, 1995ರ ನಿಯಮ 16ರಲ್ಲಿ ನಿಯಂತ್ರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರವನ್ನು (District Level Education Regulating Authority) ರಚಿಸಲಾಗಿದ್ದು ವಿವರ ಕೆಳಕಂಡಂತಿದೆ.<br><br>1. \| Deputy Commissiner of the District \| Chairman<br>2. \| Chief Executive \| Member |

<table>
<tr>
<td></td>
<td></td>
<td>
<table>
<tr><td></td><td>Officer, Zilla Panchayat</td><td></td></tr>
<tr><td>3.</td><td>Executive Engineer, Zilla Panchayat</td><td>Member</td></tr>
<tr><td>4.</td><td>Deputy Director Pre-University Education, Department of the Concerned District.</td><td>Member</td></tr>
<tr><td>5</td><td>Deputy Dirctor of Public Instruction of the Concerned District.</td><td>Member Secretary</td></tr>
</table>
The Karnataka Educational Institutions (Classification, Regulation and prescription. Regulation and prescription of curricula etc.) Rules, 1995 ನಿಯಮಗಳ ನಿಯಮ-15ರ ಪ್ರಕಾರ ತಿಳಿಸಿರುವಂತೆ ಮಕ್ಕಳ ದಾಖಲಾತಿ ಹಾಗೂ ಮಕ್ಕಳಿಂದ ಪಡಯು ಬೇಕಾದ ಶುಲ್ಕಕ್ಕೆ ಸಂಬಂಧಿಸಿದ ಮಾನದಂಡಗಳು ಉಲ್ಲಂಘನೆಯಾದ ಸಂದರ್ಭದಲ್ಲಿ ಬಾಧಿತ ಪೋಷಕರು ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರಕ್ಕೆ (District Level Education Regulating Authority) ದೂರು ಸಲ್ಲಿಸಲು ಅಥವಾ ಜಿಲ್ಲಾ ಶಿಕ್ಷಣ ನಿಯಂತ್ರಣ ಪ್ರಾಧಿಕಾರ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡುವ ವಿಚಾರಣೆ ನಡೆಸಿ ತಪ್ಪಿತಸ್ಥ ಶಾಲೆಗಳ ವಿರುದ್ಧ ಕ್ರಮಕೈಗೊಳ್ಳಲು ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.
</td>
</tr>
<tr>
<td>ಆ.</td>
<td>ಭಾಷಾ ಅಲ್ಪಸಂಖ್ಯಾಂತರ/ಧಾರ್ಮಿಕ ಅಲ್ಪಸಂಖ್ಯಾಂತರ ಶಿಕ್ಷಣ ಸಂಸ್ಥೆಗಳಲ್ಲಿ ಆಯಾ ಭಾಷೆಯ/ ಧರ್ಮದ/ ವಿದ್ಯಾರ್ಥಿಗಳ ಸಂಖ್ಯೆ ಕನಿಷ್ಠ 50% ಇದ್ದರೆ ಮಾತ್ರ ಅಂತಹ ಶಿಕ್ಷಣ ಸಂಸ್ಥೆಗಳನ್ನು ಭಾಷಾ/ಧಾರ್ಮಿಕ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳು ಎಂದು ಪರಿಗಣಿಸವ ಬಗ್ಗೆ ಸರ್ಕಾರ ನಿಲುವೇನು;</td>
<td>ಸರ್ಕಾರದ ಆದೇಶ ಸಂಖ್ಯೆ: ಇಡಿ 27 ಮಾಹಿತಿ 2012 (ಭಾಗ-I) ದಿನಾಂಕ:18/06/2014ರ ಅನ್ವಯ ಭಾಷಾ ಅಲ್ಪಸಂಖ್ಯಾತರ / ಧಾರ್ಮಿಕ ಅಲ್ಪಸಂಖ್ಯಾಂತರ ಶಿಕ್ಷಣ ಸಂಸ್ಥೆಗಳಲ್ಲಿ ಆಯಾ ಭಾಷೆ/ ಧರ್ಮದ ವಿದ್ಯಾರ್ಥಿಗಳ ದಾಖಲಾತಿ ಸಂಖ್ಯೆ ಕನಿಷ್ಠ 25% ಇರಬೇಕೆಂಬ ಷರತ್ತನ್ನು ವಿಧಿಸಲಾಗಿದೆ.</td>
</tr>
<tr>
<td>ಇ.</td>
<td>ಭಾಷಾ ಅಲ್ಪಸಂಂಖ್ಯಾತರ /ಧಾರ್ಮಿಕ ಅಲ್ಪಸಂಖ್ಯಾಂತರ ಶಿಕ್ಷಣ ಸಂಸ್ಥೆಗಳಲ್ಲಿ ಆರ್‌ಟಿಇ ಅಡಿಯಲ್ಲಿ ಬಡವರ ಮಕ್ಕಳಿಗೆ ಪ್ರವೇಶಾತಿ ನೀಡದಿದ್ದಲ್ಲಿ, ಅಂತಹ ಶಿಕ್ಷಣ ಸಂಸ್ಥೆಗಳ ಮಾನ್ಯತೆಯನ್ನು ರದ್ದು ಪಡಿಸುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಈ ಕುರಿತು ಸರ್ಕಾರದ ನಿಲುವೇನು?</td>
<td>ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 27 ಮಾಹಿತಿ 2012, ದಿನಾಂಕ:05/05/2012ರ ಪ್ರಕಾರ, ಭಾಷಾ ಅಲ್ಪಸಂಖ್ಯಾತರ / ಧಾರ್ಮಿಕ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳೆಂದು ಘೋಷಣೆಯಾಗಿರುವ ಶಾಲೆಗಳಿಗೆ ಶಿಕ್ಷಣ ಹಕ್ಕು ಕಾಯ್ದೆ 2009ರ ಸೆಕ್ಷನ್ 12(1)ರಡಿ ಆರ್.ಟಿ.ಇ ಪ್ರಕ್ರಿಯಯಿಂದ ವಿನಾಯಿತಿ ನೀಡಲಾಗಿದೆ. ಮಾನ್ಯತೆ ರದ್ದು ಪಡಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.</td>
</tr>
</table>

ಸಂಖ್ಯೆ: ಇಡಿ 49 ಎಸ್‌ಓಹೆಚ್ 2020

(ಎಸ್. ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ
ಸಕಾಲ ಸಚಿವರು